**<u>ಸಾಕ್ಷಿಗೆ ದಿನಾಂಕ 06.11.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀಮತಿ ಟಿ.ಎನ್.ಎಂ. ವಕೀಲರಿಂದಃ</u>**

1. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ನನ್ನ ಪತಿಯ ದ್ವಿಚಕ್ರ ವಾಹನ ಚಾಲನಾ ಪರವಾನಗಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಅಪಘಾತದ ದಿನ ನನ್ನ ಪತಿಯು ಚಾಲನೇ ಮಾಡುತ್ತಿದ್ದ ದ್ವಿಚಕ್ರ ವಾಹನ ನನ್ನ ಪತಿಗೆ ಸೇರಿರುತ್ತದೆ. ಅಪಘಾತದ ದಿನ ನನ್ನ ಪತಿಯು ಚಾಲನೇ ಮಾಡುತ್ತಿದ್ದ ದ್ವಿಚಕ್ರ ವಾಹನದ ಆರ್.ಸಿ., ವಿಮಾ ಪಾಲಿಸಿ ಮತ್ತು ಚಾಲನಾ ಪರವಾನಗಿ ಪತ್ರ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಿಪಿ.6 ಪ್ರಕಾರ ನನ್ನ ಪತಿಯು ಚಾಲನೇ ಮಾಡುತ್ತಿದ್ದ ದ್ವಿಚಕ್ರ ವಾಹನದ ಮುಂಭಾಗ ಜಖಂಯಾಗಿದ್ದು ಮತ್ತು ಒಂದನೇ ಎದುರುದಾರರ ವಾಹನದ ಹಿಂಭಾಗ ಜಖಂಗೊಂಡಿದೆ ಎಂದರೆ ಒಂದನೇ ಎದುರುದಾರರ ವಾಹನದ ಚಾಲಕ ಅಪಘಾತಪಡಿಸಿರುತ್ತಾನೆ. ಅಪಘಾತದ ದಿನ ನನ್ನ ಪತಿ ಮದ್ಯಪಾನ ಮಾಡಿ, ಚಾಲನಾ ಪರವಾನಗಿ ಪತ್ರ ಇಲ್ಲದೇ ಮತ್ತು ಶಿರಸ್ತ್ರಾಣ ಧರಿಸದೇ ಮುಂದೆ ಹೋಗುತ್ತಿದ್ದ ಟ್ಯಾಂಕರ್ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ.

2. ನಿಪಿ.5 ರ ಪ್ರಕಾರ ಅಪಘಾತದಿಂದ ನನ್ನ ಪತಿಗೆ ತಲೆಗೆ ಗಾಯವಾಗಿದ್ದು, ಒಂದು ವೇಳೆ ನನ್ನ ಪತಿ ಶಿರಸ್ತ್ರಾಣ ಧರಿಸಿದ್ದರೆ ಗಾಯದ ತೀವ್ರತೆ ಕಡಿಮೆಯಾಗುತ್ತಿತ್ತು ಎಂದರೆ ಸರಿಯಲ್ಲ. 4 ನೇ ಅರ್ಜಿದಾರರು ನನ್ನ ಮೃತ ಪತಿಯ ತಂದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. 4 ನೇ ಅರ್ಜಿದಾರರು ಇತ್ತೀಚಿಗೆ ತೀರಿಕೊಂಡಿರುತ್ತಾರೆ. 4 ನೇ ಅರ್ಜಿದಾರರು ಈ ಅರ್ಜಿಗ ಅವಶ್ಯಕ ಪಕ್ಷಗಾರರು ಆಗದೇ ಇದ್ದರೂ ಸಹ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಅವರನ್ನು ಸೇರಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಇಬ್ಬರು ಮಕ್ಕಳಿಗೆ ವಿವಾಹವಾಗಿದ್ದು, ಅವರು ಪ್ರತ್ಯೇಕವಾಗಿ

ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಅಪಘಾತ ಸ್ಥಳದ ಕಚ್ಚಾ ನಕಾಶೆ ಹಾಜರುಪಡಿಸಿಲ್ಲ ಎಂದರೆ ಸರಿ.

3. ಒಂದನೇ ಎದುರುದಾರರು ನನಗೆ ಮಾನವೀಯತೆ ಆಧಾರದ ಮೇರೆಗೆ ರೂ.2,00,00/- ಪಾವತಿಸಿರುತ್ತಾರೆ ಎಂದರೆ ಸರಿ. ನನ್ನ ಪತಿಯ ಶವಸಂಸ್ಕಾರ ಮತ್ತು ಶವ ಸಾಗಾಣಿಕೆಗೆ ರೂ.2,50,000/- ಖರ್ಚಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಮಧ್ಯಾಹ್ನ ಆಗಿದ್ದು, ಅದೇ ದಿನ ಸಂಜೆ ನನ್ನ ಪತಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಈ ಕಾರಣದಿಂದ ವೈದ್ಯಕೀಯ ರೂ.1,00,000/- ಆಗದೇ ಇರುವುದರಿಂದ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪತಿ ಗುತ್ತಿಗೆ ಆಧಾರದಲ್ಲಿ ಅಂಚೆ ಪೇದೆಯಾಗಿದ್ದರು, ಆದ್ದರಿಂದ ನನಗೆ ಯಾವುದೇ ಪಿಂಚಣಿ ಬರುವುದಿಲ್ಲ. ನನ್ನ ಪತಿಯ ಉದ್ಯೋಗ ಮತ್ತು ಆಧಾಯದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದೂರು ನೀಡಿ, ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಒಂದನೇ ಎದುರುದಾರರು ಏಕಪಕ್ಷೀಯ. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ
ನ್ಯಾಯಾಧೀಶರು, ಬೆಂಗಳೂರು.**